ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| ಹೇಳಿಕೆ ಹಾಳೆ<br>**(**ಆರ್**.**ಪಿ**.**ಸಂಖ್ಯೆ **57)**<br>ನಮೂನೆ<br>ಸಂಖ್ಯೆ **4**<br>**(**ಸಿವಿಲ್**)** |
|---|

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ ನ್ಯಾಯಾಲಯ**,** ಹೊಸಕೋಟೆ
ಇವರ ನ್ಯಾಯಾಲಯದಲ್ಲಿ

**ಸಿ.ಸಿ.ನಂಬರ್ 1128-2014**

ಪಿ.ಡಬ್ಲು-10.
ಸಿ.ಡಬ್ಲು-12.

ಹೆಸರು : ವೈಕುಂಠ
ತಂದೆಯ ಹೆಸರು : ಲೇ. ಚಿಕ್ಕಸಿಂಗಯ್ಯ
ವಯಸ್ಸು : 73
ಉದ್ಯೋಗ : ನಿವೃತ್ತ ಪೊಲೀಸ್ ಉಪನಿರೀಕ್ಷಕರು
ವಾಸ ಸ್ಥಳ : ದೊಡ್ಡಬಳ್ಳಾಪುರ

ದಿ: 03.07.2026 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಜೂನ್ 2013 ರಿಂದ ಮೇ 2014 ನೇ ಸಾಲಿನ ವರೆಗೆ ಹೊಸಕೋಟೆ ಪೋಲಿಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ19.03.2014 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಲೀಖಿತ ಪಿರ್ಯಾದನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನೆ ಸಂಖ್ಯೆಃ 108/2014 ಭಾರತ ದಂಡ ಸಂಹಿತೆ ಕಲಂ 392 ರಡಿಯಲ್ಲಿ ಪ್ರಕರಣವನ್ನು ನೊಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಸಂಜೆ 4.30 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚಾರಾದ ಚಾ.ಸಾ.2 ಮತ್ತು 3 ರವರ ಸಮಕ್ಷಮ ಸಂಜೆ 4.30 ರಿಂದ 5.15 ಗಂಟೆವರೆಗೆ ಮಹಜರನ್ನು ಜರುಗಿಸಿರುತ್ತೇನೆ. ತದನಂತರ ಮುಂದುವರೆದ ತನಿಖೆ ಕುರಿತು ಕಡತವನ್ನು ಚಾ.ಸಾ.14 ರವರಿಗೆ ಹಸ್ತಾಂತರಿಸಿರುತ್ತೇನೆ.

ಈಗ ನನಗೆ ತೋರಿಸಿದ ನಿಪಿ.1 ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ಸ್ವೀಕರಿಸಿಕೊಂಡ ಪಿರ್ಯಾದು ಆಗಿರುತ್ತದೆ. ನಿಪಿ.1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1 (ಬಿ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ನ್ಯಾಯಾಲಯಕ್ಕೆ ನಿವೇದಿಸಿಕೊಂಡ ಪ್ರಥಮ ವರ್ತಮಾನ ವರದಿಯಾಗಿರುತ್ತದೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ನಿಪಿ.2 ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನಾನು ಜರುಗಿಸಿದ ತಕ್ಷೀರು ಸ್ಥಳದ ಮಹಜರಾಗಿರುತ್ತದೆ. ನಿಪಿ.2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀಯುತ ಎ.ಎಸ್.ಜಿ, ವಕೀಲರಿಂದ:**

ಸಾಮಾನ್ಯವಾಗಿ ಪಿರ್ಯಾದನ್ನು ಠಾಣಾಧಿಕಾರಿ ಸ್ವೀಕರಿಸುತ್ತಾರೆ. ನಾನು ನಿಪಿ.**1** ಸ್ವೀಕರಿಸಿದ್ದೇನೆ ಎಂದು ಹೇಳುವ ದಿನ ಠಾಣಾಧಿಕಾರಿ ಬದಲಾಗಿ ಸ್ವತಃ ಸ್ವೀಕರಿಸುತ್ತೇನೆ ಎಂದರೆ ಸರಿ. ನಿಪಿ.**1** ದಾಖಲಿಸಿರುವ ಪೂರ್ವದಲ್ಲಿ ಬರೆದುಕೊಂಡು ಬರಲಾಗಿತ್ತು. ನಿಪಿ.**1** ನ್ನು **2.30** ಗಂಟೆ ತಡವಾಗಿ ದಾಖಲಸಿದ ಕುರಿತು ಚಾ.ಸಾ.**1** ರವರನ್ನ ವಿಚಾರಿಸಿರುವುದಿಲ್ಲ. ಠಾಣೆ ಯಿಂದ ಘಟನೆ ನಡೆದಿದೆ ಎಂದು ಹೇಳುವ ಸ್ಥಳಕ್ಕೆ **1** ಕಿ.ಮೀ ಅಂತವಿದ್ದೆ. ನಿಪಿ.**1** ಸ್ವೀಕರಿಸಿಕೊಂಡು ಪ್ರಕರಣ ದಾಖಲಿಸಲು **30** ನಿಮಿಷ ಸಮಯ ತಗಲಿರುತ್ತದೆ. ನಾನು ಚಾ.ಸಾ.**1** ರವರನ್ನು ವಿಚಾರಣೆ ಮಾಡದೆ ನೇರವಾಗಿ ಘಟನೆ ನಡೆದಿದೆ ಎಂದು ಹೇಳುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರು ಜರುಗಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.**2** ರಲ್ಲಿ ಮಹಜರು ಜರುಗಿಸಿದ ಸಮಯವನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಒತ್ತಾಯದ ಮೇರೆಗೆ ಪ್ರಸ್ತುತ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ನಮ್ಮ ಠಾಣೆಯ ಹಳೆ ಪ್ರಕರಣವನ್ನು ವಿಲೇವಾರಿ ಮಾಡುವ ಸಲುವಾಗಿ ಪ್ರಸ್ತುತ ಪ್ರಕರಣವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:-ಇಲ್ಲ-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.